ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ತಮ್ಮ ಅಭಿಪ್ರಾಯ. ಅದಕ್ಕೆ ಸರಿಯಾದ ಅಧಿಕಾರವಿಲ್ಲ.

Expenditure on account of Vana-mahotsava in the State.

Q.—30. Sri M. C. SHIVANANDA SHARMA (Bangalore District—General).—

Will the Government be pleased to state.—

(*a*) the expenditure incurred by them on account of Vanamahotsava in the State;

(*b*) the amount incurred districtwar on this account?

A.—The Hon'ble Sri T. MARIAPPA (Home Minister).—

(*a*) *Year* — *Expenditure*

		Rs.
1949-50	...	6,329
1950-51	...	9,091
1951-52	...	7,719

(*b*) *District*

		1949-50.	*1950-51.*	*1951-52.* (Up to 1st September)
		Rs.	Rs.	Rs.
1	Bangalore	1,050	530	35
2	Mandya	600	700	112
3	Mysore	114	400	331
4	Hassan	...	600	...
5	Chikmagalur	66	838	430
6	Shimoga	100	438	430
7	Chitaldrug	874	1,360	879
8	Tumkur	...	748	748
9	Kolar	25	1,000	1,000
10	General	3,500	2,477	3,754
		6,329	9,091	7,719

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಈ ಸಂಬಂಧದಲ್ಲಿ ಇಷ್ಟು ರೂಪಾಯಿಗಳನ್ನು ಖರ್ಚುಮಾಡುವಾಗ ಇದರ ವ್ಯವಸ್ಥೆಯನ್ನು ನೋಡಿಕೊಳ್ಳುವುದಕ್ಕೆ ಸರಿಯಾದ ಏರ್ಪಾಡುಮಾಡುವ ಅವಶ್ಯಕತೆಯಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಣ ಖರ್ಚು ಮಾಡಿರುವುದು ಜಾಸ್ತಿ ಏನೂ ಅಲ್ಲ. 6-7 ಸಾವಿರ ರೂಪಾಯಿ ಖರ್ಚುಮಾಡಿದೆ. ಡೆಪ್ಯುಟಿ ಕಮಿಷನರು ಸರಿಯಾದವ್ಯವಸ್ಥೆ ಮಾಡುತ್ತಾರೆ. ಡೆವಲಪ್‌ಮೆಂಟ್ ಕಮಿಟಿ ಇದೆ. ಅವರ ಒಪ್ಪಿಗೆ ಮೇಲೆ ಮರ ಗಿಡ ಹಾಕುವುದು ನಡೆಯುತ್ತದೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಇವುಗಳನ್ನು ರಕ್ಷಣೆಮಾಡುವ ಬಗ್ಗೆ ಏನು ವ್ಯವಸ್ಥೆ ಇದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ಎಲ್ಲ ಖಾಸಗೀ ಮನುಷ್ಯರೂ ಸಹಕರಿಸಬೇಕು. ಅದನ್ನು ಸರ್ಕಾರದವರೇ ಮಾಡಬೇಕೆಂದರೆ ಬಹಳ ಕಷ್ಟ. ಬೆಟ್ಟಕ್ಕೆ ಬಟ್ಟೆ ಹೊದಿಸಿದ ಹಾಗಾಗುತ್ತದೆ. ಸರ್ಕಾರಿ ಅಧಿಕಾರಿಗಳೂ ಸಹ ನೋಡಿಕೊಳ್ಳಬೇಕೆಂಬ ನಿಯಮ ಇದೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಸಾಮಾನ್ಯವಾಗಿ 100ಕ್ಕೆ ಎಷ್ಟು ಗಿಡ ಬದುಕಬಹುದು ಎಂದು ತನಗೆ ಕಂಡುಬಂದಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಒಂದೊಂದು ಕಡೆ ಒಂದೊಂದು ರೀತಿಯಾಗಿದೆ. ಕೆಲವು ಕಡೆ 20% 30%ಬದುಕಿದೆ, ಇನ್ನು ಕೆಲವು ಕಡೆ 60% ವರಗೂ ಹೋಗಿರುವ ಸನ್ನಿವೇಶ ಇದೆ. ಇದು ಜನಗಳ ನಡತೆ, ದೇಶಾಭಿಮಾನ, ಇದರ ಮೇಲೆ ಅವಲಂಬಿಸಿರುತ್ತದೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಮರ ಗಿಡ ಕಡಿದು ಹಾಕಬಾರದು ಎಂಬ ಮನೋಭಾವ ಸಾರ್ವಜನಿಕರಿಗೆ ಬರಬೇಕು ಎಂಬುದೇ ಈ ವನಮಹೋತ್ಸವ ಮಾಡುವುದರ ಉದ್ದೇಶವಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ದೇಶ ಭಕ್ತಿಯಿಂದ ಎಲ್ಲರೂ ವೃಕ್ಷ ಸಂಪತ್ತು ಅಭಿವೃದ್ಧಿಯಾಗುವಂತೆ ಕೆಲಸ ಮಾಡಲು ಮನಸ್ಸುಮಾಡಲಿ ಎಂಬ ಉದ್ದೇಶದಿಂದ ಮಾಡುತ್ತಿದ್ದಾರೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಕೋಲಾರ ತಾಲ್ಲೂಕು ಶೆಟ್ಟಿಮಾದನಹಳ್ಳಿಯಲ್ಲಿ ನೆಟ್ಟ ಸಾವಿರಾರು ಸಸಿಗಳು ನಾಶವಾಗಿವೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಳೆ ಬರದೆ ಗಿಡಗಳು ಒಣಗಿಹೋಗಿವೆ. ಪುನಃ ಸಸಿಗಳನ್ನು ಹಾಕುತ್ತೇವೆ ಎಂದು ಅಲ್ಲಿನ ಜನರು ಒಪ್ಪಿಕೊಂಡಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯಜಿಲ್ಲೆ).—ವರ್ಷಂಪ್ರತಿ ಖರ್ಚುಮಾಡಿರುವುದರ ಪೈಕಿ 1949-50ನೇ ಇಸವಿಗೆ ಪೂರ್ತಿ ಖರ್ಚಾಗದೆ ಇನ್ನೂ ಬಾಕಿ ಇರುವುದು ಸರ್ಕಾರದವರಿಗೆ ಗೊತ್ತೇ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಕೆ. ವೀರಣ್ಣಗೌಡರು.—ಓಹರ್ಸ್‌ಪಡೆದು ಹಣ ಕೊಡದೆ ತಕರಾರಿನಲ್ಲಿರುವ ಪ್ರಸಂಗ ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ಕೆಲಸ ಸಾಮಾನ್ಯವಾಗಿ ದೇಶಸೇವೆಯ ದೃಷ್ಟಿಯಿಂದ ಮಾಡಬೇಕಾದ ಕೆಲಸ ಆಗಿದೆ.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಇರುವ ಮರಗಳನ್ನು ಕಡಿಯದಂತೆ ಮಾಡುವುದು ಮುಖ್ಯವಾದ್ದಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಬಿ. ಚೆನ್ನಬೈರೇಗೌಡರು.—ಬೆಂಗಳೂರು ಸಿಟಿ fuel ಡಿಪಾರ್ಟ್‌ಮೆಂಟಿನವರು ತಮಗೆ ಸೌದೆ ಸರಬರಾಯಿಮಾಡುವುದಕ್ಕಾಗಿ ಸಾಲು ಮರಗಳನ್ನು ಕಡಿದು ಕೊಂಡು ಬನ್ನಿ ಎಂದು ಪ್ರಕಟಣೆಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಿ fuel p'antations ಇವೆಯೋ ಅದನ್ನೆಲ್ಲಾ ಕಡಿದುಕೊಂಡು ಬನ್ನಿ ಎಂದು ಹೇಳಿರಬಹುದೇ ವಿನಾ ಸಾಲುಮರಗಳನ್ನು ಕಡಿದುಕೊಂಡು ಬನ್ನಿ ಎಂದು ಹೇಳಿಲ್ಲ.

ಶ್ರೀ ಬಿ. ಚನ್ನಬೈರೇಗೌಡರು.—ಬೆಂಗಳೂರು ಸಿಟಿಯಲ್ಲಿ ಸಾದೆ ಹೆಚ್ಚಿಗೆ ಮಾರಾಟವಾಗುತ್ತಿರುವುದರಿಂದ ಈ ರೀತಿ ಸಾಲು ಮರಗಳನ್ನು ಕಡಿಯುಕೊಂಡು ಬರುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಈ ಪ್ರಶ್ನೆಗೆ ಸಂಬಂಧಿಸಿಲ್ಲ.

ಶ್ರೀ ಬಿ. ಚೆನ್ನಬೈರೇಗೌಡರು.—ಪ್ರತಿಯೊಂದು ಜಿಲ್ಲೆಗೂ ಹೀಗೆ ಸಸಿಗಳನ್ನು ನೆಡುವುದಕ್ಕಾಗಿ ಎಷ್ಟು ಹಣ ಖರ್ಚುಮಾಡಬೇಕೆಂದು ಮಾಡಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಯಾ ಜಿಲ್ಲೆಯಿಂದ ಅಂಕಿ ಅಂಶಗಳನ್ನು ತರಿಸಿಕೊಂಡು ಯಾರ್ಯಾರು ಎಷ್ಟು ಬೇಕೆಂದು ಕೇಳುತ್ತಾರೋ ಅದರಂತೆ ಕೊಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಒಟ್ಟು ಇದಕ್ಕಾಗಿ ಈ ವರ್ಷ ಎಷ್ಟು ಹಣ ಕೊಟ್ಟಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವರ್ಷಕ್ಕೆ 10,000 ರೂಪಾಯಿನ allotment ಮಾಡಿದ್ದೇವೆ.

ಶ್ರೀ ಟಿ. ಮಾದಯ್ಯಗೌಡರು.—ಇನ್ನೂ ಹೆಚ್ಚಿಗೆ ಹಣ ಕೊಟ್ಟು ಪ್ರೋತ್ಸಾಹಿಸಿದರೆ ಇನ್ನೂ ಉತ್ತಮ ರೀತಿಯಲ್ಲಿ ಕೆಲಸ ನಡೆಸುತ್ತಾರಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದರಲ್ಲಿ ಹಣದ ಆಭಾವದ ಪ್ರಶ್ನೆಯಲ್ಲ. ಜನಗಳು ತಾವೇ ತಾವಾಗಿ ಮುತುವರ್ಜಿವಹಿಸಿ ಕೆಲಸ ಮಾಡಿದರೆ ಒಳ್ಳೆಯದು. ದುಡ್ಡು ಖರ್ಚುಮಾಡಿ ಮಾಡಿಸುವುದರಿಂದೇನೂ ಹೆಚ್ಚಿನ ಫಲವಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ವರ್ಷ ವರ್ಷ ಇದನ್ನು ಮಾಡಿಸುತ್ತಿರುವುದರಿಂದ ಜನರಿಗೆ ಈ ವಿಚಾರದಲ್ಲಿ ಕ್ರಮೇಣ ಉತ್ಸಾಹ ಜಾಸ್ತಿಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ಉತ್ಸಾಹ ಜಾಸ್ತಿಯಾಗುತ್ತಿದೆ. ವರ್ಷ ವರ್ಷ ಜಾಸ್ತಿ ಹಾಕುತ್ತಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ವನ ಮಹೋತ್ಸವದಲ್ಲಿ ಹಾಕಿದ ಗಿಡಗಳನ್ನು ಕಿತ್ತುಕೊಂಡು ಹೋಗಿರುವವರಿಗೇನಾದರೂ ಶಿಕ್ಷೆಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಿಕ್ಕಿದರೆ ಶಿಕ್ಷೆ ಮಾಡುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ವನಮಹೋತ್ಸವ ಸಮಾರಂಭದಲ್ಲಿ ಸ್ಪೆಷಲ್ ಪಾರೆಸ್ಟ್‌ಗಳಲ್ಲಿಯೂ ಈ ಕೆಲಸವನ್ನು ಮಾಡುತ್ತಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ಅಲ್ಲೂ ಲಕ್ಷಾಂತರ ಗಿಡಗಳನ್ನು ಹಾಕಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಅದರ ಖರ್ಚು ಇದರಲ್ಲಿ ಸೇರಿದೆಯೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ರೂರಲ್ ಡೆವಲಪ್‌ಮೆಂಟ್ ಸಂಬಂಧವಾಗಿ ಈ ಬಗ್ಗೆ ಖರ್ಚುಮಾಡಿರುವುದು ಮಾತ್ರ ಇಲ್ಲಿ ಸೇರಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ವನ ಮಹೋತ್ಸವದಲ್ಲಿ ಹೆಚ್ಚಿಗೆ ಗಿಡಗಳನ್ನು ಹಾಕಿರುವವರಿಗೇನಾದರೂ ಬಹುಮಾನ ಕೊಟ್ಟಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೊಟ್ಟಿದೆ.

ಶ್ರೀ ಜಿ. ಎ. ಆಚಾರ್ಯರವರು (ಬೆಂಗಳೂರು ಜಿಲ್ಲೆ).—ಇಂಗ್ಲೆಂಡಿನಲ್ಲಿ ಹೀಗೆ ಮರ ಕಡಿದವರನ್ನು ಜೈಲಿಗೆ ಕಳುಹಿಸುತ್ತಾರೆಂಬುದು ಗೊತ್ತಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿ ಏನೇನು ಶಿಕ್ಷೆಯಿರಬೇಕೆಂದು ಕಾನೂನಿನಲ್ಲಿ ವಿಧಿಸಿರುತ್ತಾರೋ ಅದರಂತೆ ಶಿಕ್ಷೆಕೊಡುತ್ತಾರೆ.

Superintendent of the Traffic Board

Q.—133. **Sri A. SUBBARAYA SETTY** (Kolar District—General).—Will the Government be pleased to state :—

(*a*) the name of the Superintendent of the Traffic Board ;

(*b*) his qualification and his pay ;

(*c*) the length of his service in his present post ;

(*d*) whether they have received any representations about the delay in the disposal of records in this office ;

(*e*) the reasons for his being continued in the same office for such a long time ;

(*f*) whether they desire to continue him in the same post ?

A.—**The Hon'ble Sri T. MARIAPPA** (Home Minister).—

(*a*) Sri R. M. Vancheswara Iyer.

(*b*) Graduate—Rs. 230 per mensem.

(*c*) Two years and ten months.

(*d*) No.

(*e*) The period cannot be considered long.

(*f*) Yes, till he is transferred.

ಶ್ರೀ ಎ. ಸುಬ್ಬರಾಯಶೆಟ್ಟರು.—ಸಾಧಾರಣವಾಗಿ ಎಷ್ಟು ವರ್ಷಕ್ಕೊಂದು ಸಾರಿ ಒಬ್ಬ ಅಧಿಕಾರಿಗಳನ್ನು ವರ್ಗ ಮಾಡಬೇಕೆಂದಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಮಾನ್ಯವಾಗಿ ಮೂರು ವರ್ಷಕ್ಕೊಂದು ಬಾರಿ ಎಂದಿದೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಈ ಟ್ರಾಫಿಕ್ ಬೋರ್ಡಿಗೆ ಬಂದ ಅಪ್ಲಿಕೇಷನ್‌ಗಳು ನಿಯಾಗಿ ಪ್ರಯಾರಿಟಿ ಪ್ರಕಾರ ವಿಲೇವಾರಿ ಆಗುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದರಲ್ಲಿ ಪ್ರಯಾರಿಟಿ ಎಂದಿಲ್ಲ. ಯಾವ ಒಂದು ಅರ್ಜಿ ಕೊಟ್ಟರೂ ಆ case ಪೂರ್ತಿಯಾಗಿ work up ಆಗಿ ಆಮೇಲೆ ಆರ್ಡರ್ ಸಾದರಾಗುತ್ತದೆ, ಅಷ್ಟೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಯಾವ ಅಪ್ಲಿಕೇಷನ್ ಮೊದಲು ಬರುತ್ತದೋ ಅದು ಮೊದಲು work up ಆಗಬೇಕೆಂದಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲು ಬಂದ ಮಾತ್ರಕ್ಕೇ ಮೊದಲು work up ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಬೇಕಾದ referenceಗಳು ಬಂದಮೇಲೆ ಆಗಬೇಕು.

ಶ್ರೀ ಎ. ಸುಬ್ಬರಾಯಶೆಟ್ಟರು.—ಅವರು reference ಗಳನ್ನೇನಾದರೂ suppress ಮಾಡಿದ್ದರೆ?